ಅಧಿಸೂಚನೆ ಹೊರಡಿಸಿದ್ದು, ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಸಂದರ್ಶನಗಳನ್ನು ನಡೆಸಲಾಗುತ್ತಿದೆ.

(ಇ) ಮೇಲೆ ತಿಳಿಸಿದಂತೆ ಈಗಾಗಲೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

(ಈ) ಖಾಲಿ ಹುದ್ದೆಗಳ ಭರ್ತಿಗೆ ಈಗಾಗಲೇ ಕ್ರಮಕೈಗೊಳ್ಳಲಾಗಿದೆ. ಮುಂದುವರೆದು ಹಾಲಿ ಲಭ್ಯವಿರುವ ಅಧಿಕಾರಿ/ಸಿಬ್ಬಂದಿ ಸೇವೆ ಉಪಯೋಗಿಸಿಕೊಂಡು ರೈತರಿಗೆ ಮತ್ತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಇಲಾಖಾ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

(ಉ) ಉದ್ಭವಿಸುವುದಿಲ್ಲ.

750 (1215) ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು):– ಕೃಷಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ಕೃಷಿ ಇಲಾಖೆಯಿಂದ ರೈತರಿಗೆ ವಿತರಿಸುವ ಡೀಸಲ್ ಪಂಪ್‌ಗಳು ; ಪ್ರಯೋಜನವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಇದಕ್ಕೆ ಬದಲಿ ವ್ಯವಸ್ಥೆ ಮಾಡಲಾಗುವುದೇ ; ಇಲ್ಲದಿದ್ದಲ್ಲಿ ಕಾರಣವೇನು (ವಿವರ ನೀಡುವುದು) ;

(ಇ) ರೈತರ ಕೆರೆಗಳಲ್ಲಿ ನೀರು ಇಲ್ಲದೆ ಡೀಸೆಲ್ ಪಂಪು ಪ್ರಯೋಜನಕ್ಕೆ ಬರದಿರುವುದು ನಿಜವಲ್ಲವೇ ;

(ಈ) 2006–07ನೇ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ಕೃಷಿ ಇಲಾಖೆಯಿಂದ ವಿತರಿಸಲಾದ ಡೀಸೆಲ್ ಪಂಪು ಸೆಟ್‌ಗಳೆಷ್ಟು ; ಇದರ ಪ್ರಯೋಜನ ಪಡೆದ ರೈತರ ಸಂಖ್ಯೆ ಎಷ್ಟು (ವಿವರ ಒದಗಿಸುವುದು) ;

(ಉ) 2007–08ನೇ ಸಾಲಿನಲ್ಲಿ ಡೀಸೆಲ್ ಪಂಪು ಬದಲು ವಿದ್ಯುತ್ ಪಂಪು ನೀಡಲು ವ್ಯವಸ್ಥೆ ಮಾಡಲಾಗುವುದೇ ; ಹಾಗಿದ್ದಲ್ಲಿ, ಇದಕ್ಕೆ ನೀಡುವ ಸಹಾಯಧನ ಎಷ್ಟು ?

ಶ್ರೀ ಬಂಡೆಪ್ಪ ಕಾಶಂಪೂರ (ಕೃಷಿ ಸಚಿವರು) :–

(ಅ) ಇಲ್ಲಾ

(ಆ) ಉದ್ಭವಿಸುವುದಿಲ್ಲ.

(ಇ) ಇಂತಹ ಯಾವುದೇ ಪ್ರಕರಣಗಳು ಕೃಷಿ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

(ಈ) ಪುತ್ತೂರು ತಾಲ್ಲೂಕಿನ ನಾಲ್ಕು ಫಲಾನುಭವಿಗಳು ಇದರ ಪ್ರಯೋಜನ ಪಡೆದಿದ್ದು ಅದರ ವಿವರಗಳನ್ನು ಕೆಳಗೆ ನೀಡಲಾಗಿದೆ.

1. ಶ್ರೀ ಕೃಷ್ಣ ಪ್ರಸಾದ್ ಬಿನ್ ಈಶ್ವರ್ ಭಟ್ ಪುಳಿಕುಕ್ಕು, ಕೋಡಿಂಬಾಳ ಗ್ರಾಮ

2. ಶ್ರೀ ಹಂಝು ಬಿನ್ ಇಬ್ರಾಹಿಂ ಕುದ್ಮುಳಿ ಮನೆ ಕೊಳ್ತಿಗೆ ಗ್ರಾಮ

3. ಶ್ರೀ ಕೂಸಪ್ಪಗೌಡ ಬಿನ್ ದುಗ್ಗಪ್ಪಗೌಡ, ಕೊಳ್ತಿಗೆ ಗ್ರಾಮ

4. ಶ್ರೀಮತಿ ಶೀಲಾವತಿ ಕೋಂ ನಾರಾಯಣ ಮೇರ್ಲ ಬೈಲಾಡಿಮನೆ ಇರ್ದೇ ಗ್ರಾಮ.

(ಉ) ಇಲ್ಲ.

751 (1205) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :– ಸಹಕಾರ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :–

(ಅ) ರಾಜ್ಯದಲ್ಲಿ ಯಶಸ್ವಿನಿ ಯೋಜನೆ ಯಾವಾಗ ಪ್ರಾರಂಭಿಸಲಾಗಿದೆ.

(ಆ) ಹಾಲಿ ಈ ಯೋಜನೆಯ ಫಲಾನುಭವಿಗಳೆಷ್ಟು ?

(ಇ) ಈ ಯೋಜನೆಯಡಿ ಯಾವ ಯಾವ ಖಾಯಿಲೆಗಳಿಗೆ ಚಿಕಿತ್ಸೆ ಪಡೆಯಲು ಅವಕಾಶ ನೀಡಲಾಗಿದೆ. ಈ ಯೋಜನೆಯ ಲಾಭ ಪಡೆದವರ ಸಂಖ್ಯೆ ಎಷ್ಟು ?

(ಈ) ಈ ಯೋಜನೆಯ ಫಲಾನುಭವಿಗಳನ್ನು ಹೆಚ್ಚಿಸಿ, ಈ ಯೋಜನೆಯಡಿ ಚಿಕಿತ್ಸೆ ಪಡೆಯಲು ಅವಕಾಶ ನೀಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

ಶ್ರೀ ಜಿ.ಟಿ. ದೇವೇಗೌಡ (ಸಹಕಾರ ಸಚಿವರು) :–

(ಅ) ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಯೋಜನೆಯನ್ನು 2003–04ನೇ ಸಾಲಿನಿಂದ ಪ್ರಾರಂಭಿಸಲಾಗಿದೆ.

(ಆ) ಹಾಲಿ ಯೋಜನೆಯಲ್ಲಿ ನೋಂದಾಯಿಸಿದ ವರ್ಷಾವಾರು ಫಲಾನುಭವಿಗಳ ಸಂಖ್ಯೆ ಈ ಕೆಳಗೆ ನಮೂದಿಸಿದಂತೆ ಇರುತ್ತದೆ.

ವರ್ಷ	ನೋಂದಾಯಿಸಿದ ಫಲಾನುಭವಿಗಳ ಸಂಖ್ಯೆ (ಲಕ್ಷಗಳಲ್ಲಿ)
2003-04	16.01